ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ಯವರ ನ್ಯಾಯಾಲಯ, ಚಾಮರಾಜನಗರ .
ಸಿಸಿ.1736/2017

| | | | |
|---|---|---|---|
| ಸಾಕ್ಷಿದಾರರು ಹೆಸರು | : | ಸತೀಶ | ದಿನಾಂಕಃ 04.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು. |
| ತಂದೆಯ ಹೆಸರು | : | ಕೆ.ತಮ್ಮಯ್ಯ | |
| ವಯಸ್ಸು | : | 56 ವರ್ಷ | |
| ಉದ್ಯೋಗ | : | ಪ್ರಾದೇಶಿಕ ಸಾರಿಗೆ ಅಧಿಕಾರಿ, ಮಡಿಕೇರಿ | **CW-11** |
| ವಾಸಸ್ಥಳ | : | ಮಡಿಕೇರಿ | **PW-10** |

ಮುಖ್ಯ ವಿಚಾರಣೆ : ಮಾನ್ಯ ಎಪಿಪಿರವರಿಂದಃ

ನಾನು 2016 ರಿಂದ 2018 ರವರೆಗೆ ಮೈಸೂರಿನ ಪಶ್ಚಿಮ ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ ಹಿರಿಯ ಮೋಟಾರ್ ವಾಹನ ನಿರೀಕ್ಷನಾಗಿ ಕರ್ತವ್ಯನಿರ್ವಹಿಸಿರುತ್ತೇನೆ.

ನಾನು ದಿಃ 11.05.2017 ರಂದು ರೈಲ್ವೆ ಪೋಲೀಸ್ ನೀರಿಕ್ಷಕರು ಮೈಸೂರು ಇವರ ಮನವಿಯಂತೆ ಅದೇ ದಿನ ಮದ್ಯಾಹ್ನ 2.45 ಗಂಟೆಗೆ ರೈಲ್ವೆ ಪೋಲೀಸ್ ಸ್ಟೇಷನ್ ಆವರಣದಲ್ಲಿದ್ದ ಮೋಟಾರ್ ಸೈಕಲ್ ನಂ. ಕೆ ಎ 09 ಇಜಿ 1697 ನ್ನು ಪರೀಶಿಲಿಸಿ ವರದಿ ನೀಡಿರುತ್ತೇನೆ. ನಾನು ವಾಹನ ಪರೀಶೀಲಿಸಿದಾಗ ವಾಹನದ ಹೆಡ್ ಲೈಟ್ ಡೂಮ್, ಹಿಂಬದಿಯ ನಂಬರ್ ಪ್ಲೇಟ್, ಹಿಂದಿನ ಎರಡು ಇಂಡಿಕೇಟರ್ ಗಳು ಜಖಂ ಆಗಿರುವುದಾಗಿ ವರದಿ ನೀಡಿರುತ್ತೇನೆ. ನನ್ನ ಅಭಿಪ್ರಾಯದಂತೆ ಯಾವುದೇ ತಾಂತ್ರಿಕ ದೋಷದಿಂದ ಅಪಘಾತವಾಗಿರುವುದು ಕಂಡು ಬಂದಿರುವುದಿಲ್ಲ. ಸಾಕ್ಷಿ ನಿಪಿ 9 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ 9(ಎ) ಎಂದು ಗುರುತಿಸಲಾಯಿತು.

ಪಾಟೀಸವಾಲುಃ ಆರೋಪಿಗಳ ಪರ ಶ್ರೀ ಸಿ ಎಸ್ ವಕೀಲರಿಂದಃ

ಆ ದಿನ ನಾನು ಠಾಣೆಯ ಆವರಣೆಕ್ಕೆ ಹೋಗಿ ವಾಹನ ಪರಿಶೀಲನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 9 ರಲ್ಲಿ ವಾಹನವು ಯಾವ ವರ್ಷದ ಮಾಡಲ್ ಎಂದು ನಮೂದಿಸಿರುವುದಿಲ್ಲ. ಆ ದಿನ ನಿರೀಕ್ಷಕರು ನನಗೆ ಲಿಖಿತ ಮನವಿ ಸಲ್ಲಿಸಿರುತ್ತಾರೆ. ನಾನು ಲಿಖಿತ ಮನವಿ ಪಡೆಯದೆ ಇದ್ದರು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಠಾಣೆಯ ಆವರಣದಲ್ಲಿದ್ದ ವಾಹನವನ್ನು ಪರಿಶೀಲಿಸಿ ನಿಪಿ

9 ರಂತೆ ವರದಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ತನಿಖಾಧಿಕಾರಿಯ ಕೋರಿಕೆ ಮೇರೆಗೆ ವಾಹನ ತಪಾಸಣೆ ಮಾಡದೆ ಪ್ರಕರಣಕ್ಕೆ ಅನುಕೂಲವಾಗುವಂತೆ ನಿಪಿ 9 ನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಪ್ರಕರಣ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲಾ.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇ ಒ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಚಾಮರಾಜನಗರ.